**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.686/2014**

ಪಿ.ಡಬ್ಲ್ಯೂ: 11

ಸಿ.ಡಬ್ಲ್ಯೂ: 12

ಸಾಕ್ಷಿದಾರರ ಹೆಸರು : ಅಬ್ದುಲ್ ಸತ್ತಾರ್

ತಂದೆಯ ಹೆಸರು : ಖಲಂದರ್ ಖಾನ್

ವಯಸ್ಸು : 34 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಬಾವಿಕೆರೆ

**ದಿನಾಂಕ: 10-12-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ಬಾವಿಕೆರೆಯ ಸರ್ವೆ ನಂ: 7ರಲ್ಲಿ ನಮ್ಮ ಮನೆ ಇರುತ್ತದೆ. ನಮ್ಮ ಮನೆಯ ಪಕ್ಕದಲ್ಲಿ ಸರ್ಕಾರಿ ಜಾಗ ಇದ್ದು, ಸದರಿ ಜಾಗಕ್ಕೆ ಸರ್ಕಾರದವರು ಕಾಂಪೌಂಡ್ ಹಾಕಿರುತ್ತಾರೆ. ಸದರಿ ಜಾಗವನ್ನು ಆರೋಪಿತರು ಅಕ್ರಮವಾಗಿ ಹೊಡೆದುಕೊಂಡಿರುತ್ತಾರೆಂದು ಆರೋಪಿ ರಾಮಯ್ಯನವರು ಪಂಚಾಯ್ತಿ ಕಾರ್ಯದರ್ಶಿ ಇದುವ್ವ, ಅಸೆಸ್ ಮೆಂಟಿನಲ್ಲಿ ಹೆಚ್ಚುವರಿಯಾಗಿ ಹೆಸರನ್ನು ಸೇರಿಸಿರುತ್ತಾರೆಂದು ಈಗ್ಗೆ ಸುಮಾರು 4, 5 ವರ್ಷಗಳ ಹಿಂದೆ ಮ: 12-00 ಗಂಟೆ ಸಮಯದಲ್ಲಿ ಕೃಷಿ ಇಲಾಖೆಗೆ ಸೇರಿದ ಜಾಗಕ್ಕೆ ಗ್ರಾಮ ಲೆಕ್ಕಾಧಿಕಾರಿ ಜಗದೀಶ್ ಹಾಗೂ ಇತರೇ 6-7 ಜನರು ಬಂದು ಮಹಜರಿಗೆ ನನ್ನ ಸಹಿ ಪಡೆದುಕೊಂಡರು. ನಿಪಿ-4 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸದರಿ ಸಾಕ್ಷಿ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯ್ತು. ಸದರಿ ಮಹಜರಿನಲ್ಲಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮಹಜರಿಗೆ ರವಿ ರವರು ಸಹಿ ಮಾಡಿರುತ್ತಾರೆ.

**ಪಾಟೀಸವಾಲು : 1ನೇ ಆರೋಪಿ ಪರ** ಶ್ರೀ ಕೆ ಎಲ್ ಆರ್ **ವಕೀಲರಿಂದ.**

ನನ್ನ ಮನೆಯ ಚೆಕ್ಕುಬಂದಿ ಹೇಳಲಾಗುವುದಿಲ್ಲ. 7ನೇ ಸರ್ವೆ ನಂಬರ್ ಜಾಗ ಇದ್ದು, ಅದರ ಚೆಕ್ಕುಬಂದಿ ಹೇಳಲಾಗುವುದಿಲ್ಲ. ನನ್ನ ಸಹಿಯನ್ನು ಗ್ರಾಮ ಲೆಕ್ಕಾಧಿಕಾರಿ ಪಡೆದಿರುತ್ತಾರೆ. ನಾನು ಸಹಿ ಮಾಡಿದ ದಾಖಲೆಯನ್ನು ನೋಡಿರುವುದಿಲ್ಲ. ಅವರು ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿರುತ್ತೇನೆ.

ನಾನು ಮತ್ತು ರವಿ ಸಹಿ ಮಾಡಿದ್ದು, ಮುಂಚೆ ಯಾರು ಸಹಿ ಮಾಡಿದರೆಂದು ನಾನು ನೋಡಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

*(2 ನೇ ಆರೋಪಿ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ಪ್ರಾರ್ಥಿಸಿರುತ್ತಾರೆ. ಆದ್ದರಿಂದ ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲಾಯ್ತು)*

**ಮರುವಿಚಾರಣೆಃ ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

**ಓ. ಕೇ. ಸ. ಇ. ಎ. ಒ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**